doc-615
T-P-2

Reg No B G 155 31 12 72

In The State First Golden Jubilee Celebrated Paper 'Satyavadi' daily, Mysore 4

ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಸಂವೇರಿಸಿದ
ಪತ್ರಿಕೆ

ಸತ್ಯವಾದಿ

56th Year of Publication

★

News, Views, Dharmic Moral Ethical Matters

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಪ್ರತಿ ಜಿಲ್ಲೆಗೂ ವಸ್ತುಪ್ರದರ್ಶನಗಳು ಅಗತ್ಯ

ಡಾಕ್ಟರ್ ದಂಪತಿಗಳ ಸ್ತುತ್ಯ ಕಾರ್ಯ

ಗುಲ್ಬರ್ಗಕ್ಕೆ ಹದಿನಾರು ಕಿಲೋಮೀಟರ್ ದೂರದಲ್ಲಿರುವ ಅಭಾವ ಪೀಡಿತ ಸಣ್ಣೂರು ಗ್ರಾಮದ ಜನತೆಯು ತೊಂದರೆಯನ್ನು ಕಂಡು ಮನಸ್ಸರಿಗಿದ ಶ್ರೀಮತಿ ಮತ್ತು ಶ್ರೀ ವಸಂತ ಗ್ರಾನುಪುರೋಹಿತ ದಂಪತಿಗಳು ಸ್ವಯಂ ಪ್ರೇರಿತವಾಗಿ ಅಲ್ಲಿಯ ಜನರಿಗೆ ಒಂದು ವಾರಕ್ಕಾಗುವಷ್ಟು ಪುಕ್ಕಟೆ ಪೌಷ್ಟಿಕಾಂಶಗಳ ಮಾತ್ರೆಗಳನ್ನು ಈಚೆಗೆ ವಿತರಣೆ ಮಾಡಿದರು.

ಕಾಂಗ್ರೆಸ್ ಅಧಿವೇಶನ

ಬಿದಯನಗರ—74ನೇ ಕಾಂಗ್ರೆಸ್ ಅಧಿವೇಶನಕ್ಕೆ ೪ಧ ಏಲಿಯ ಜನರು ಹಾಜರಿದ್ದರೆಂದೂ, ಚಪ್ಪರಕ್ಕೆ ನುಗ್ಗಿಬರುತ್ತಿದ್ದರೆಂದೂ ಗೊತ್ತಾಗಿದೆ — ಇಂದಿರಾ ಗಾಂಧಿಯವರ ಸಮಾಜವಾದದ ಸಂದೇಶವನ್ನು ದೇಶದ ಮೂಲೆಮೂಲೆಗೂ ಹರಡಲು 'ಇಂದಿರಾ ಸ್ಪೆನ್ಯದ' ವ್ಯವಸ್ಥಾಪಕರು ಕಡೇಪಕ್ಷ 50000 ಕಾರ್ಯಕರ್ತರನ್ನು ಸೇರಿಸಲು ನಿರ್ಧರಿಸಿದ್ದಾರೆ.

★

ಫುಟ್‌ಬಾಲ್ ಸಂಥ

ಸೈಲೂರು— ಐತಿಯಲ್ ಜಾವಾ ಏರ್ಪಡಿಸಿರುವ ತಾ॥ 31 ರಿಂದ ಪ್ರಾರಂಭವಾಗುವ ಫುಟ್‌ಬಾಲ್ ಸಂಥದಲ್ಲಿ 35 ಟೀಮುಗಳು ಭಾಗವಹಿಸುವವು.

●

ಪೀನಲ್ ಕೋಡ್ ತಿದ್ದುಪಡಿ

ನವದೆಹಲಿ - ಭಾರತ ಪೀನಲ್ ಕೋಡ್ (ತಿದ್ದುಪಡಿ) ಮಸೂದೆ ಬಗ್ಗೆ ಪಾರ್ಲಿಮೆಂಟಿನ ಎಗರು ಭವನಗಳ ಜಂಟಿ ಸಮಿತಿ ಪಾರ್ವಜನಿಕರ ಸಮಾಲೋಚನೆಯನ್ನು ಸ್ವಾಗತಿಸಿದೆ

ಪ್ರತಿ ಜಿಲ್ಲೆಯಲ್ಲೂ ಪ್ರದರ್ಶನಗಳು

ಹಾಸನ – ಇಲ್ಲಿಯ 23 ನೇ ಜಿಲ್ಲಾ ಪ್ರದರ್ಶನವನ್ನು ಉದ್ಘಾಟಿಸುತ್ತಾ, ಸಾರಿಗೆಮಂತ್ರಿ ಶ್ರೀ ಅಜೀಜ್ ಸೇಟ್‌ರವರು ವ್ಯವಸಾಯಗಾರರಿಗೆ ನವೀನ ರೀತಿಯ ವ್ಯವಸಾಯ ವಿಷಯ ಬಗ್ಗೆ ತಿಳುವಳಿಕೆ ಕೊಡಲು ಮತ್ತು ದೇಶದಲ್ಲಿ ಆಗಿರುವ ಅಭಿವೃದ್ಧಿಗಳನ್ನು ತಿಳಿಸಲು ಪ್ರತಿ ಜಿಲ್ಲೆಯಲ್ಲೂ ವಸ್ತುಪ್ರದರ್ಶನಗಳು ಅವಶ್ಯಕವೆಂದು ಹೇಳಿದರು – ಅನರಿಗಿತ್ತ ಬಿನ್ನವತ್ತಳಿಕೆಗೆ ಉತ್ತರಿಸುತ್ತಾ, ಜಟಕಾ ಸ್ಟ್ಯಾಂಡು ನಿರ್ಮಿಸಲು ಅಧಿಕಾರಿಗಳಿಗೆ ತಿಳಿಸಲಾಗಿದೆಯೆಂದೂ, ಹಾಸನದಿಂದ ಬೊಂಬಾಯಿಗೆ ನೇರ ಬಸ್ ಓಡಾಟ ವಿಷಯ ಪರ್ಯಾಲೋಚಿಸಲಾಗುವುದೆಂದೂ ತಿಳಿಸಿದರು.

ಅಭಾವ ಪರಿಹಾರ

ಬೀದರ್— ಬೀದರ್ ಜಿಲ್ಲೆಯ 614 ಪರಿಹಾರ ಕಾರ್ಯಗಳಲ್ಲಿ 36500 ಜನರಿಗೆ ಕೆಲಸ ಒದಗಿಸಲಾಗಿದೆ.

★

ಚಳವಳಿಗಾರರ ಕಾರ್ಯ

ಕಡಪಾ— 300 ಮಂದಿ ಪ್ರತ್ಯೇಕ ಆಂಧ್ರ ಚಳವಳಿಗಾರರು ಪೋಲೀಸು ಸ್ಟೇಷನ್ನಿನ ಮೇಲೆ ಜೈ ಆಂಧ್ರ ಧ್ವಜ ಏರಿಸಲು ಹೊರಟಾಗ ದಸ್ತಗಿರಿಮಾಡಲ್ಪಟ್ಟರು – ಅವರು ಅದಕ್ಕೆ ಮುಂಚೆ ರೇಡಿಯೋ ಸ್ಟೇಷನ್, ಸ್ಟೇಟ್ ಬ್ಯಾಂಕ್ ಮುನಿಸಿಪಲ್ ಆಫೀಸಿನ ಮೇಲೆ ಏರಿಸಿದರು

★

ಆಹಾರ ಆಮದು

ಬಿದಯನಗರ–ಈವರ್ಷ ಸ್ವಲ್ಪ ಆಹಾರ ಧಾನ್ಯ ಆಮದು ಮಾಡಿಕೊಳ್ಳುವದನ್ನು ಭಾರತೀಯರು ಅಪಮಾನಕರವೆಂದು ತಿಳಿಯಬಾರದೆಂದು ವಿಶೇಷ ವಿಚಾರ ಮಂತ್ರಿ ಶ್ರೀ ಸ್ವರ್ಣಸಿಂಗ್ ಹೇಳಿದರು.

ಈ ಅದಪ್ಪನೋಡಿ ಲ ಲ

ನ್ಯೂಯಾರ್ಕ್—65 ವರ್ಷದ ವಿಧವೆ ಶ್ರೀಮತಿ ಈಡಾ ಮಾರ್ಗೂಗೆ ಅಕೆಯ ನೆರೆಮನೆ ಶ್ರೀಮತಿ ಹ್ಯೂಸ್ ಪ್ರತಿ ವರ್ಷ ಕ್ರಿಸ್ಮಸ್ ಕಾರ್ಡನ್ನೂ ಅದರ ಜೊತೆಯಲ್ಲಿ ಒಂದು ಐರಿಷ್ ಸ್ವೀಪ್‌ಸ್ಟೇಕ್ ಟಿಕೇಟನ್ನೂ ಕೊಡುತ್ತಿದ್ದಳು. ಈ ವರ್ಷ ಕೊಟ್ಟ ಆ ಲಾಟರಿ ಟಿಕೇಟಿಗೆ 120000 ಡಾಲರು (ರೂ. 9 ಲಕ್ಷ) ಬಹುಮಾನ ದೊರೆತಿದೆ. ಅದರಲ್ಲಿ ಶ್ರೀಮತಿ ಹ್ಯೂಸ್‌ಗೆ ಸ್ವಲ್ಪಹಣವನ್ನೂ, ದಾನಧರ್ಮಕ್ಕೆ ಸ್ವಲ್ಪ ವನ್ನೂ ಕೊಡುವುದಾಗಿ ಹೇಳಿರುವಳು.

●

ಸೂಕ್ತವಾದ ಸ್ಮಾರಕ

ಮದರಾಸು— ದಿ॥ ರಾಜಾಜಿಯವರಿಗೆ ಗಿಂಡಿಯಲ್ಲಿ ಸೂಕ್ತ ಸ್ಮಾರಕ ನಿರ್ಮಿಸಲಾಗುವುದೆಂದು ಮುಖ್ಯಮಂತ್ರಿ ಶ್ರೀ ಕರುಣಾನಿಧಿಯವರು ಹೇಳಿದರು.

★

ಪೂರ್ಣ ರೇಷನಿಂಗ್ ಸಲಹೆ

ಬಿದಯನಗರ— ಆಹಾರಧಾನ್ಯಗಳ ಒಟ್ಟಾರೆ ವ್ಯಾಪಾರವನ್ನು ಸರಕಾರ ವಹಿಸಿಕೊಂಡ ನಂತರ, ಅವಶ್ಯಕವಾದರೆ ಆಹಾರ ಧಾನ್ಯಗಳ ಪೂರ್ಣ ರೇಷನ್ನಿಂಗ್ ಜಾರಿಗೆ ತರಬೇಕೆಂದು ಪ್ಲಾನಿಂಗ್ ಮಂತ್ರಿ ಶ್ರೀ ಧಾರ್‌ರವರು ಸ್ವಚ್ಛಿಕ್ಪ ಕಮಿಟಿಯಲ್ಲಿ ಹೇಳಿದರು.

○

ಅಭಾವಪೀಡಿತ ಸ್ಥಳಗಳಿಗೆ

ಹಾಸನ— ಜಿಲ್ಲಾ ರೈತರು ಒದಗಿಸಿದ 66 ವ್ಯಾಗ್ ಭತ್ತದ ಹುಲ್ಲನ್ನು ಬಿಜಾಪುರ ಮುಂತಾದ ಅಭಾವಪೀಡಿತ ಸ್ಥಳಗಳಿಗಾಗಿ ಜಿಲ್ಲಾಧಿಕಾರಿಗಳು ತರಿಸಿಕೊಟ್ಟರು – ಫೆಬ್ರವರಿ ಕಡೆಯೊಳಗೆ 450 ವ್ಯಾಗ್‌ಗಳ ಪ್ಪ ಕಳುಹಿಸಲು ಯೋಜಿಸಲಾಗಿದೆ

ರಾಜ್ಯದಲ್ಲಿ ರೇಷನಿಂಗ್!

ಬೆಂಗಳೂರು— ಬೆಲೆ ಏರಿಕೆಯ ಚರ್ಚೆಯಲ್ಲಿ, ರಾಜ್ಯದ ಹೆಚ್ಚು ಪ್ರದೇಶಗಳಲ್ಲಿ ರೇಷನಿಂಗ್ ಜಾರಿಗೆ ತರಕಾಗುವುದೆಂದು ವಿಧಾನ ಪರಿಷತ್ತಿನಲ್ಲಿ ಆರ್ಥ ಮಂತ್ರಿ ಶ್ರೀ ಫೊರ್ಡಿಯವರು ಸೂಚಿಸಿದರು.

●

ಅಮೂಲ್ಯ ತುಳಸೀಮಾಲೆ

ಪಾಟ್ನಾ— ವಿಮಾನ ನಿಲ್ದಾಣದಲ್ಲಿ ತಮಗೆ ಎಲ್ಲಾ ಹಾರಗಳನ್ನೂ ಪ್ರಧಾನಿ ಇಂದಿಯವರು ರದ್ದಿಯುದ್ದಕ್ಕೂ ನಿಂತು "ಇಂದಿರಾ ಗಾಂಧಿ ಕಿ ಜೈ" ಎಂದು ಘೋಷಿಸುತ್ತಿದ್ದ ಮಕ್ಕಳು ಮತ್ತು ತಾಯಂದಿರ ಕಡೆ ಎಸೆದರು – ಆದರೆ ಕಾವಿ ಉಡುಪಿನ ಸನ್ಯಾಸಿ ಇತ್ತ ತುಳಸೀಮಾಲೆಯೊನ್ನು ತಾವು ಇಟ್ಟುಕೊಂಡರು.

★

ಸಮಾನಾಂತರ ಸರಕಾರ

ಚಿತ್ತೂರು— ತಾ॥ 31 ರಂದು ತಿರುಪತಿ ಸಭೆ ನಡೆದ ನಂತರ ಆಂಧ್ರಪ್ರದೇಶದಲ್ಲಿ ಸಮಾನಾಂತರ ಸರಕಾರವನ್ನು ಸ್ಥಾಪಿಸುವುದಾಗಿ ಆಂಧ್ರ ಪ್ರಜಾ ಪರಿಷತ್ ನಾಯ ಶ್ರೀ ಲಚ್ಚಣ್ಣ ಬೆದರಿಕೆ ಹಾಕಿರುವರು

★

ಹಕ್ಕುಬಾಧ್ಯತೆ ನಿರ್ಬಂಧನೆ

ಬಿದಯನಗರ– ಯುಗಗಳಿಂದ ಬಡತನದಿಂದ ನರಳುತ್ತಿರುವ ಬಹುಸುರಿದಿ ಸಾಮೂಹಿಕ ಬಡಜನರ ಪ್ರಯೋಜನಕ್ಕಾಗಿ ಅವಶ್ಯಬಿದ್ದರೆ ಸರಕಾರವು ಕೆಲವರ ಹಕ್ಕು ಬಾಧ್ಯತೆಯನ್ನು ಮಿತಿಗೊಳಿಸಬೇಕಾಗುವದೆಂದು ಪ್ರಧಾನಿ ಇಂದಿರಾರವರು ಕಾಂಗ್ರೆಸ್ ಅಧಿವೇಶನದಲ್ಲಿ ಮಾಡಿದ ಭಾಷಣದಲ್ಲಿ ತಿಳಿಸಿದರು.

★

ಉತ್ತರಬೊಂಬಾಯಿನಲ್ಲಿ ವಿಮಾನು ಒಣಗಿಸುವ ವೆಸ್ಟೂವಾದಲ್ಲಿ ಕಸ್ಟಂಸಿನವರು ರೂ 8 ಲಕ್ಷ ಬೆಲೆಯ ಅಕ್ರಮ ಸಾಗಾಣಿಕಾ ಪದಾರ್ಥಗಳನ್ನು ವಶಪಡಿಸಿಕೊಂಡರು

ಡಾ॥ ಮೋದಿಯವರ ಕಾರ್ಯಕ್ರಮ

ಪದ್ಮಭೂಷಣ ನೇತ್ರದಾನಿ ಡಾ॥ ಎಂ. ಪಿ. ಮೋದಿಯವರು (ಭಾರತಾಧ್ಯಕ್ಷರ ನೇ॥ ನೇತ್ರ ವೈದ್ಯರು) ತಾ॥ 2-1-73 ರಂದು ಬೆಂಗಳೂರು ಜಯನಗರದ ಕುಜೇಲಾಂ ಕಲ್ಯಾಣಮಂಟಪದಲ್ಲಿ ಉಚಿತ ನೇತ್ರ ಚಿಕಿತ್ಸಾ ಶಿಬಿರ ನಡೆಸುವರು.

★

ಪಾಟೀಲು ಮಂತ್ರಿಮಂಡಲ

ಬಾಗಲಕೋಟೆ— ಶ್ರೀಸಾಮಾನ್ಯರ ಕಲ್ಯಾಣಕ್ಕಾಗಿ ವೀರೇಂದ್ರ ಪಾಟೀಲರ ಮಂತ್ರಿಮಂಡಲವು ಏನೂ ಮಾಡಲಿಲ್ಲವೆಂದೂ ನೀರಾವರಿ ಮತ್ತು ಚಿಕ್ಕ ಕೈಗಾರಿಕೆ ಅಭಿವೃದ್ಧಿ ಬದಲು ರಾಕ್ಷಸಾಕಾರ ಕಟ್ಟಡಗಳಮೇಲೆ ಹಣ ಖರ್ಚುಮಾಡಿತೆಂದೂ ಜನ ಸಂಸ್ಥೆಯ ಅಧ್ಯಕ್ಷ ಶ್ರೀ ಮಲ್ಲಿಕಾರ್ಜುನಯ್ಯನವರು ತಿಪಾದಿಸಿರುವರು.

ಪ್ರವಾಹ ಸಂತ್ರಸ್ತರ ಪರಿಹಾರ ನಿಧಿ ಸಂಗ್ರಹಕ್ಕೆ

ತಾ. 3-1-73 ರಂದು ಪಾದಯಾತ್ರೆ

ಮಹನೀಯರೆ,

ಚಿಕ್ಕಹೊಳೆ ಅಣೆಕಟ್ಟು ಒಡೆದು ದುರಂತಕ್ಕೀಡಾದ ಈ ಜಿಲ್ಲೆಯ ಚಾಮರಾಜನಗರ, ಯಳಂದೂರ, ಕೊಳ್ಳೇಗಾಲ ತಾಲ್ಲೂಕುಗಳ ಸುಮಾರು 60 ಕ್ಕೂ ಮಿಗಿಲಾದ ಗ್ರಾಮಗಳಲ್ಲಿ ಹಲವು ಸಹಸ್ರ ಮಂದಿ ತಮ್ಮ ಸಕಲವನ್ನೂ ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ. ಸರಕಾರವು ಈ ನಿರಾಶ್ರಿತರಿಗೆ ಆಹಾರ ಹಂಗಾಮಿ ವಸತಿ ಬಗ್ಗೆ ಸಲಕರಣೆ, ಪಣ್ಣಮಟ್ಟಿನ ನಷ್ಟದ ಪರಿಹಾರ ಮತ್ತು ಬಡ್ಡಿರಹಿತ ಸಾಲ ಮೊದಲಾದವುಗಳನ್ನು ಒದಗಿಸುತ್ತಿದೆ. ಆದರೆ ಸಾರ್ವಜನಿಕ ಬೆಂಬಲ ಮತ್ತು ಸಹಾಯವು ಸಂಪೂರ್ಣವಾಗಿ ಬರದಿದ್ದಲ್ಲಿ, ಈ ನಿರಾಶ್ರಿತರ ಪುನರ್ವಸತಿ ಮೊದಲಾದ ಕಾರ್ಯಕ್ರಮಗಳು ಸಂಪೂರ್ಣಗೊಳ್ಳುವಂತಿಲ್ಲ.

★

ಪ್ರವಾಹ ಸಂತ್ರಸ್ತರ ಪರಿಹಾರನಿಧಿ ಸಂಗ್ರಹಕ್ಕೆ

ಮೈಸೂರು ನಗರದಲ್ಲಿ ತಾ॥ 3-1-73 ರಂದು ಬೆಳಿಗ್ಗೆ 8-30 ಕ್ಕೆ ಸರಿಯಾಗಿ

ಮೈಸೂರು ಪುರಭವನದಿಂದ ಪ್ರಮುಖ ನಾಗರೀಕರು ಅಧಿಕಾರಿಗಳು ಮಂತ್ರಿಗಳರು ಪಾದಯಾತ್ರೆಯನ್ನು ನಡೆಸಲು ನಿರ್ಧರಿಸುತ್ತಾರೆ. ಈ ಪಾದಯಾತ್ರೆಯಲ್ಲಿ ಮೈಸೂರು ರಾಜ್ಯದ ಪ್ರಖ್ಯಾತ ಚಲನಚಿತ್ರ ನಟನಟಿಯರು ಭಾಗವಹಿಸುತ್ತಾರೆ. ಸಾರ್ವಜನಿಕರು ಈ ಪಾದಯಾತ್ರೆಯ ಉದ್ದೇಶವು ಸಫಲವಾಗುವಂತೆ ಉದಾರವಾಗಿ ಧನ, ಧಾನ್ಯ, ವಸ್ತ್ರ ಮೊದಲಾದುವುಗಳನ್ನು ದಾನಮಾಡಿ, ಸಹಕರಿಸಬೇಕೆಂದು ಈ ಮೂಲಕ ಪ್ರಾರ್ಥಿಸಿಕೊಳ್ಳಲಾಗಿದೆ.

ಡಿ ಕೃಷ್ಣ

ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ಮತ್ತು ಪಾದಯಾತ್ರೆ ಸಮಿತಿ ಅಧ್ಯಕ್ಷರು

★

ಭಾರತದಲ್ಲಿ ಗೋವಧೆ ಪೂರ್ಣ ನಿಷೇಧವಾಗಲಿ

Edited Printed and Published by Dharmapracharaniratа M S Krishna Rao (Proprietor) at the Satyavadi Press, Chamaraja puram, Mysore 4

ವುಡ್‌ಲಾಂಡ್ಸ್ 29 12 72 ರಿಂದ ನಿತ್ಯ ಪ್ರದರ್ಶನ 3ನೇ ವಾರ

ಸೆವೆನ್ ಆರ್ಟ್ಸ್ ಪಿಕ್ಚರ್ಸ್‌ರವರ ಹಿಂದಿ ವರ್ಣ ಚಿತ್ರ

ರಾಜಾ ಜಾನಿ

ಪ್ರತಿ ದಿನ 3 ಪ್ರದರ್ಶನಗಳು

ಪಾತ್ರ – ಧರ್ಮೇಂದ್ರ ಹೇಮಮಾಲಿನಿ ಪ್ರೇಮ್‌ಚೋಪ್ರ ಪ್ರೇಮ್‌ನಾಥ್

ಹೆಲ್ಪ್ ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್

ಬೆಳಗಿನ ಪ್ರದರ್ಶನ 10-30 ವೀರಸಂಕಲ್ಪ

ಅಪೆರಾ 28 12 72 ರಿಂದ

ಜಯಂತಿ ಫಿಲಂಸ್‌ರವರ ಈಸ್ಟ್‌ಮನ್ ಕಲರ್ ತಮಿಳು ಚಿತ್ರ

ರಾಮನ್ ತೇಡಿಯ ಸೀತೈ

ಪಾತ್ರ – ಎಂ. ಜಿ. ರಾಮಚಂದ್ರ್ ಜಯಲಲಿತ ತಾಯ್‌ನಾಗೇಶ್

ವಿ. ಕೆ. ರಾಮಸ್ವಾಮಿ

ಸಂಗೀತ – ಎಂ ಎಸ್. ವಿಶ್ವನಾಥ್ ನಿರ್ದೇಶನ – ಪಿ ನೀಲಕಂಠ್

ದಿನ 3 ಪ್ರದರ್ಶನಗಳು

Protect the Cow



Help The Gorakshana

— Humanitarian Propoganda Monthly....

Quality Printing Neat Binding

Lakshminarasimha Press

Sivarampet, Mysore 1

For Mosquito Nets in all sizes Visit Bank Road Bahusar, Mysore